# ಮಲ್ಲಿಕಾ ಮರ್ಡರ್ ನೆನಪು



ವಸಂತಗಳು
‘ಮರ್ಡರ್’ ಹಿಂದಿ ಸಿನಿಮಾ ತೆರೆಕಂಡು ಇಪ್ಪತ್ತು ವಸಂತಗಳು
ಉರುಳಿವೆ. ಆದರೆ, ಆ ಚಿತ್ರದ ಕುರಿತು ಮಾತುಕತೆ ಈಗಲೂ
ನಡೆಯುತ್ತಿದೆ. ಇತ್ತೀಚೆಗೆ ಸಂದರ್ಶನವೊಂದರಲ್ಲಿ ನಟಿ ಮಲ್ಲಿಕಾ ಶೆರಾವತ್
ಮಾತಿಗೆ ತೆರೆದುಕೊಂಡರು. ಅದರಲ್ಲಿ, ಅವರ ಹಾಗೂ ಆಗ ಸಹನಟ
ಆಗಿದ್ದ ಇಮ್ರಾನ್ ಹಶ್ಮಿ ನಡುವಿನ ವೈಮನಸ್ಸಿಗೆ ಕಾರಣ ಏನು ಎಂಬ ಪ್ರಶ್ನೆ
ಎದುರಾಯಿತು.

ಅದಕ್ಕೆ ಮಲ್ಲಿಕಾ ಕೊಟ್ಟ ಉತ್ತರ ಮಜವಾಗಿತ್ತು: ‘ನಾವೆಲ್ಲ ಆಗ ಚಿಕ್ಕ
ವಯಸ್ಸಿನವರು. ಯಾರು ಯಾರೋ ಏನೇನೋ ಕಿವಿಗೆ ಊದುತ್ತಿದ್ದರು.
ನಮ್ಮಲ್ಲಿ ಸ್ವಪ್ರತಿಷ್ಠೆ ಕೂಡ ಆಗ ಹೆಚ್ಚಾಗಿ ಇತ್ತು. ಯಾವುದನ್ನು ಕೇಳಬಾರದು,
ಯಾವುದು ಕೇಳಬೇಕು ಎಂಬ ಅರಿವೇ ಇರಲಿಲ್ಲ. ಹೀಗಾಗಿ ನಾನು ಇಮ್ರಾನ್
ಅವರ ಕುರಿತು ತಪ್ಪು ಭಾವನೆ ಮೂಡಿಸಿಕೊಂಡಿದ್ದೆ. ಆದರೆ, ಅವರೊಬ್ಬ
ಜಂಟಲ್‌ಮನ್ ಎನ್ನುವುದು ಕ್ರಮೇಣ ಗೊತ್ತಾಯಿತು.’

‘ಮರ್ಡರ್’ ಹಿಂದಿ ಸಿನಿಮಾ ಬೋಲ್ಡ್ ದೃಶ್ಯಗಳಿಂದಾಗಿಯೇ ಗಮನ
ಸೆಳೆದಿತ್ತು. ಮಲ್ಲಿಕಾ ಆಗ ಪಡ್ಡೆಗಳ ನಿದ್ದೆಗೆಡಿಸಿದ್ದರು. ಅಂತಹುದೊಂದು
ಇಮೇಜ್ ನಿಭಾಯಿಸುವುದು ಕೂಡ ಆಗ ನಟಿಗೆ ಸವಾಲಾಗಿತ್ತು.

‘ಆಗ ಹಿಂದಿ ಸಿನಿಮಾಗಳ ನಾಯಕಿಯರು ಒಂದು ಸಿದ್ಧಸೂತ್ರವನ್ನು
ಒಪ್ಪಿಕೊಂಡಿದ್ದರು. ಯಾರು ಎಷ್ಟು ಮೈತೋರಬೇಕು, ಚುಂಬನದ
ಮಿತಿ ಏನು ಎಂದೆಲ್ಲ ಒಂದು ಬಗೆಯ ಹೊಂದಾಣಿಕೆಯ ಮೇಲೆ
ಚಿತ್ರಗಳು ಬರುತ್ತಿದ್ದವು. ಮರ್ಡರ್ ಸಿನಿಮಾ ಈ ಸೂತ್ರವನ್ನು
ಚಿಂದಿ ಮಾಡಿತು. ಆಗ ನನ್ನನ್ನು ಕೆಲವು ಹಿರಿಯ ನಟಿಯರೇ
ಗೇಲಿ ಮಾಡಿದರು. ನನ್ನ ಮುಖ ಚೆನ್ನಾಗಿಲ್ಲ, ಬರೀ ದೇಹ
ಪ್ರದರ್ಶನವೇ ಬಂಡವಾಳ ಎಂದೆಲ್ಲ ಹೀಗಳೆದರು. ಆದರೆ,
ಸಿನಿಮಾಗೆ ಒಂದು ಆತ್ಮ ಇರುತ್ತದೆ. ಹೀಗಾಗಿ ಅದರ
ಪಾತ್ರಧಾರಿಯಾಗಿ ನ್ಯಾಯ ಸಲ್ಲಿಸಿರುವ ಬಗೆಗೆ ನನಗೆ
ಖಾತರಿ ಇತ್ತು.
ಹೀಗಿದ್ದೂ ಕೆಲವು ಟೀಕೆಗಳು ಗಾಸಿ ಉಂಟುಮಾಡಿದ್ದವು’ ಎಂದು ಮಲ್ಲಿಕಾ
ನೆನಪಿಸಿಕೊಂಡರು.

ಇಮ್ರಾನ್ ಆ ಸಿನಿಮಾದಲ್ಲಿ ಬೋಲ್ಡ್ ದೃಶ್ಯಗಳನ್ನು ಮಾಡುವಾಗ
ನೀಡಿದ್ದ ಸಹಕಾರ ಹಾಗೂ ಮಾನಸಿಕವಾಗಿ ನೀಡಿದ್ದ ಭದ್ರತೆಯನ್ನೂ
ಮಲ್ಲಿಕಾ ಸ್ಮರಿಸಿದರು. ಈಗ ಅದೇ ನಟನ ಜೊತೆ ಸಿನಿಮಾದಲ್ಲಿ ನಟಿಸಲು
ಬುಲಾವು ಬಂದರೆ ತಾವು ಸಿದ್ಧ ಎಂದೂ ಹೇಳಿದರು.

‘ಮರ್ಡರ್’ ಸಿನಿಮಾ ಬಂದ ಕಾಲ ಈಗಿನಂತೆ ಇರಲಿಲ್ಲ. ಈಗ ಅಂತಹ
ಪ್ರಯೋಗಗಳನ್ನು ಜನ ಸ್ವೀಕರಿಸುತ್ತಾರೆ. ಆಗ ಮಡಿವಂತಿಕೆ ಹೆಚ್ಚಾಗಿ
ಇದ್ದುದರಿಂದ ಅಂತಹ ಯತ್ನಕ್ಕೆ ಸಿಗಬೇಕಾದ ಮನ್ನಣೆ ಸಿಕ್ಕಿರಲಿಲ್ಲ ಎಂದೂ
ಮಲ್ಲಿಕಾ ಅಭಿಪ್ರಾಯಪಟ್ಟರು. ■



## ಆಲಿಯಾಗೆ ಕಹಿ

ವಾಸನ್ ಬಾಲಾ ನಿರ್ದೇಶನದ ‘ಜಿಗ್ರಾ’ ಹಿಂದಿ ಸಿನಿಮಾ ಗಳಿಕೆಯ ವಿಷಯದಲ್ಲಿ ತೆವಳುತ್ತಿದೆ. ನಟಿ ಆಲಿಯಾ ಭಟ್ ಅಭಿನಯದ ಸಿನಿಮಾವೊಂದು ಕಳೆದ ಹತ್ತು ವರ್ಷಗಳಲ್ಲಿ ಇಷ್ಟು ಕಳಪೆ ಪ್ರದರ್ಶನ ನೀಡಿಯೇ ಇರಲಿಲ್ಲ ಎಂದು ವಿಶ್ಲೇಷಿಸಲಾಗುತ್ತಿದೆ. ನಿರ್ಮಾಪಕರಲ್ಲಿಯೂ ಒಬ್ಬರಾಗಿರುವ ಆಲಿಯಾ ಚಿತ್ರದ ಪ್ರಚಾರದಲ್ಲಿ ಖುದ್ದು ತೊಡಗಿಸಿಕೊಂಡಿದ್ದರು. ಆದರೆ, ಬಾಕ್ಸ್ ಆಫೀಸ್ ಗಳಿಕೆಯಲ್ಲಿ ಅದು ಕೆಲಸ ಮಾಡಿಲ್ಲ. ಮೊದಲ ಒಂದು ವಾರದ ಅವಧಿಯಲ್ಲಿ 25 ಕೋಟಿ ರೂಪಾಯಿ ಗಳಿಸುವುದು ಕೂಡ ಕಷ್ಟವಾಗಿದೆ ಎಂದು ಹೇಳಲಾಗಿದೆ. ಆದರೆ, ಇಂತಹ ವರದಿಗಳನ್ನು ಆಲಿಯಾ ನಿರಾಕರಿಸಿದ್ದಾರೆ.

ಮರಣದಂಡನೆಗೆ ಒಳಗಾದ ಸಹೋದರನನ್ನು ರಕ್ಷಿಸಲು ಯುವತಿ ನಡೆಸುವ ಹೋರಾಟದ ಕಥನವನ್ನು ‘ಜಿಗ್ರಾ’ ಒಳಗೊಂಡಿದೆ.

ತಮ್ಮ ‘ಸಾವಿ’ ಎಂಬ ಚಿತ್ರದ ವಸ್ತುವನ್ನು ಕದ್ದು ಈ ಸಿನಿಮಾ ಮಾಡಲಾಗಿದೆ ಎಂದು ನಟಿ–ನಿರ್ದೇಶಕಿ ದಿವ್ಯಾ ಖೋಸ್ಲಾ ಕುಮಾರ್ ಇತ್ತೀಚೆಗೆ ಆರೋಪಿಸಿದ್ದರು. ಈಶಾನ್ಯ ಭಾರತದ ನಟರ ವಿಷಯದಲ್ಲಿ ಭೇದ ಮಾಡಲಾಗುತ್ತಿದೆ ಎಂದು ಮಣಿಪುರ ನಟ ಬಿಜೋಯ್ ಥಾಂಗ್ಜಮ್ ಎಂಬ ನಟ ನೇರವಾಗಿ ಆರೋಪಿಸಿದ್ದರು. ಆಲಿಯಾ ಸುಮ್ಮನೆ ಗಳಿಕೆಯ ತಪ್ಪು ಲೆಕ್ಕ ಕೊಡುತ್ತಿದ್ದಾರೆ ಎಂಬ ಆರೋಪವೂ ಕೇಳಿಬಂದಿತ್ತು. ■